# ಸಾಕು ಸಾಕಿನ್ನು ಸಂಸಾರ ಸುಖವು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 554.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 165.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 09.
4. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 293.
5. **Note:** Lyrics given here are as per Ref. 1. The wordings in Ref. 2 are same as in Ref. 1 except few differences which are not considered here. The wordings in Ref. 3 and Ref. 4 are slightly different and are not considered here.

ರಾಗ: ಮುಖಾರಿ ತಾಳ: ಝಂಪೆ

ಸಾಕು ಸಾಕಿನ್ನು ಸಂಸಾರ ಸುಖವು || ಪ ||
ಶ್ರೀಕಾಂತ ನೀನೊಲಿದು ಕರುಣಿಸೈ ಹರಿಯೆ || ಅಪ ||

ಉದಿಸಿದವು ಪಂಚ ಭೂತಗಳಿಂದ ಓಷಧಿಗ-
ಳುದಿಸಿದವು ಓಷಧಗಳಿಂದನ್ನವು
ಉದಿಸಿದವು ಅನ್ನದಿಂ ಶುಕ್ಲ ಶೋಣಿತವೆರಡು
ಉದಿಸಿದವು ಸತಿ-ಪುರುಷರೀರ್ವರೊಳು ಹರಿಯೆ || 1 ||

ಸತಿ-ಪುರುಷರೊಂದಾಗಿ ರತಿಕ್ರೀಡೆಗಳ ಮಾಡೆ
ಪತನವಾದಿಂದ್ರಿಯವೆ ಹೊಲೆ ರಕ್ತವು
ಋತುಕಾಲದೊಳಗೆರಡು ಏಕತ್ರ ಸಂಧಿಸಲು
ಗತಿಸಿದುದು ಮಾಸವೊಂದೀರ್ವರೊಳು ಹರಿಯೆ || 2 ||

ಮಾಸವೆರಡಲಿ ಶಿರ ಮಾಸ ಮೂರರೊಳಂಗ
ಮಾಸ ನಾಲ್ಕರಲಿ ಚರ್ಮದ ಹೊದ್ದಿಕೆ

ಮಾಸವೈದಾರಲಿ ನಖ ರೋಮ ನವರಂಧ್ರ
ಮಾಸವೇಳರಲಿ ಹಸಿವು ತೃಷೆ ಹರಿಯೆ || 3 ||

ತಿಂಗಳೆಂಟರಲಿ ಪೂರ್ವಾನುಭವ ಕರ್ಮಗಳು
ಅಂಗವೆಲ್ಲವ ತಿಳಿದು ಅರಿಕೆಯಿಂದ
ಅಂಗನೆಯುದರಕಿನ್ನೆಂದಿಗೂ ಬರೆನೆಂದು
ಹಿಂಗದಲೆ ಧ್ಯಾನಿಸುತ ಕಳೆದೆನೊ ದಿನವ || 4 ||

ಇನಿತು ನವಮಾಸ ಮಲ ಮೂತ್ರದಾ ಗರ್ಭದಲಿ
ಸಿಲುಕಿರಲು ನರಕದಾಯಾಸದೊಳಗೆ
ಘನಮರುತ ಯೋಗದಿಂ ನರಳುತಿಲ್ಲಿಗೆ ಬಂದು
ಜನಿಸಿ ಮೃತ ಭಾವದಿಂ ನೊಂದೆನೈ ಹರಿಯೆ || 5 ||

ಧರೆಯ ಮೇಲುದಿಸಿ ಶ್ರೀ ವಿಷ್ಣು ಮಾಯಕೆ ಸಿಲುಕಿ
ಪರವಶದಿ ಹಸಿದು ನೀರಡಿಸಿ ಬೇಗ
ಭರದಿ ಕಣ್ದೆರೆದು ಗೋಳಿಟ್ಟು ಪ್ರಪಂಚವಿದು
ಸ್ಥಿರವೆಂದು ನಂಬಿ ನಾ ಮರುಳಾದೆ ಹರಿಯೆ || 6 ||

ಶಿಶುತನದೊಳಿರಲು ನೊಣ ಮುಸುಕಲದರಿಂದಳಲು
ಹಸಿದನಿವನೆಂದು ಸ್ತನ್ಯವ ಕೊಡುವರು
ಹಸಿ ತೃಷೆಗಳಿಂದಳಲು ಹಾಡಿ ತೂಗುತಲಿಹರು
ಪಶುವಂತೆ ಶಿಶುತನದೊಳಿರಲಾರೆ ಕೃಷ್ಣ || 7 ||

ಬಾಲ್ಯದಲಿ ಕೆಲವು ದಿನ ಬರಿದೆ ಹೋಯಿತು ಹೊತ್ತು
ಮೇಲೆ ಗೋಳಿಟ್ಟು ವಿದ್ಯೆಗಳ ಕಲಿತು
ಮೇಲೆ ಯೌವನ ಬರಲು ತನು ಮೂಲವನು ಮರೆತು
ಬಾಲೆಯರ ಬಯಸಿ ನಾ ಮರುಳಾದೆ ಹರಿಯೆ || 8 ||

ಜ್ವರದ ಮೇಲತಿಸಾರ ಬಂದೊದಗುವಂದದಲಿ
ನಿರತ ಕಾಮ ಕ್ರೋಧ ವಿಷಯಂಗಳಲ್ಲಿ
ತರುಣಿಯರಿಗೊಡವೆ ಭಂಗಾರ ಬೇಕೆಂದೆನುತ
ಪರಸೇವೆಯೊಳು ನಾನು ಕಡು ನೊಂದೆನಯ್ಯ || 9 ||

ದಿಟ್ಟತನದಲಿ ಗಳಿಸಿ ತರುವಾಗ, ಸತಿ-ಸುತರು
ಕಟ್ಟಿ ಕೊಂಡಿಹರು, ತನುವು ಬಿಟ್ಟ ಬಳಿಕ
ಕುಟ್ಟಿಕೊಂಡಳುತ ಹೋಯೆಂದು ಗೋಳಿಡುತಂಜಿ
ಮುಟ್ಟದೆ ದೂರದಲಿ ನಿಂದಿಹರು ಹರಿಯೆ || 10 ||

ಸತ್ತವರಿಗಳಲೇಕೆ ಸುತ್ತ ಬಂಧುಗಳೆಲ್ಲ
ಸ್ವಸ್ಥವಿರಿ ಹೊತ್ತು ಹೋಯಿತು ಎನುತಲಿ
ಒತ್ತಿಸಿದ ಕಸಕಿಂತ ಅತ್ತತ್ತ ಈ ದೇಹ
ಹೊತ್ತು ಕೊಂಡೊಯ್ದು ಅಗ್ನಿಯಲಿ ಬಿಸುಡುವರು || 11 ||

ದೇವನೇ ನಾನಿನ್ನು ಯೋನಿ ಮಾರ್ಗದ ಒಳಗೆ
ಈ ವಿಧದಿ ಭವಣೆ ಬಡಲಾರೆ ಬಹಳ
ಕಾವ ಕಾರುಣಿಯೆ ನಮ್ಮ ಪುರಂದರ ವಿಠಲನೆ
ಭಾವ ಭಕುತಿಯ ಕೊಟ್ಟು ರಕ್ಷಿಸೋ ಹರಿಯೆ || 12 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವೈರಾಗ್ಯ ಪದ್ಧತಿಯಲ್ಲಿ ಜೀವನದ ಕ್ಲೇಶಗಳನ್ನು ಬಿತ್ತರಿಸುವ ಪದ.

**Classification:** Keerthane
**Ankita:** purandara vittala
**Location:** NA
**Category:** Jeevana Darshana, vairagya, Aartha Bhava,
**Sub-Category:** vairagya, samsara, karuna, anna, pati, patni, putra, bandhu, Krishna, rakta, karma, hennu, dhyana, naraka, bhumi, huttu, niru, hasive, Vishnu, maya, kannu, loka, halu, nona, koosu, sittu, bangara, deha, agni, deva,
**Pravachana:** NA
**Explanation:** NA